# ಸಂಕಲ್ನಾತ್ಮಕ ಪರೀಕ್ಷೆ 2021- 22

ತರಗತಿ : 7 ನೇ ವರ್ಗ

ಅಂಕಗಳು : 40

| ಲಿಖಿತ | ಮೌಖಿಕ | ಒಟ್ಟು | 40% |
|---|---|---|---|
| | | | |

ವಿಷಯ : ಕನ್ನಡ

ಸಮಯ : 90 ನಿ.

## ಪ್ರ-1 'ಅ' ಪಟ್ಟಿಯ ಅಂಶಗಳನ್ನು 'ಬ' ಪಟ್ಟಿಯ ಅಂಶಗಳೊಂದಿಗೆ ಹೊಂದಿಸಿ ಬರೆಯಿರಿ. (1x4=4)

| ಅ) | ಬ) |
|---|---|
| 1) ಆದಿಪುರಾಣ | ಅ) ಅತ್ತಿಮಬ್ಬೆ |
| 2) ಶಾಂತಿಮರಾಣ | ಆ) ಲಕ್ಕುಂಡಿ |
| 3) ಸಾಹಸಭೀಮ ವಿಜಯ | ಇ) ಪೊನ್ನಕವಿ |
| 4) ದಾನಚಿಂತಾಮಣಿ | ಈ) ಪಂಪಕವಿ |
| | ಉ) ರನ್ನಕವಿ |

## ಪ್ರ-II ಈ ಪದ್ಯವನ್ನು ಪೂರ್ಣಗೊಳಿಸಿ. ( 4x1=4 )

ರಕ್ಷಿಸಬೇಕು ..................................

--------------------------------------------

--------------------------------------------

----------------- ಈ ಕರುನಾಡ ಚೆಲುವು

## ಪ್ರ-III ಈ ಕೆಳಗಿನವುಗಳ ಬಿಟ್ಟ ಸ್ಥಳ ತುಂಬಿರಿ. ( 1x4=4 )

1) ಆಮಯು .......................... ಸಂಗ ಬೆಳೆಸಿತು.

2) ಪಡ್ಡೆ ಹುಡುಗರು ...................... ಬೀಳಬೇಕು ಎಂದುಕೊಂಡರು.

3) ಸ್ವಾತಂತ್ರ್ಯ ಅನ್ನೋದು .................... ಅಂತ ಬೇಡಿದರೆ ಸಿಗುವ ವಸ್ತು ಅಲ್ಲ.

4) ದಾಸ್ಯದ ಅರಮನೆಗಿಂತ ....................... ಅರಮನೆಯೇ ಲೇಸು.

## ಪ್ರ-IV ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ. ( 1x4=4 )

1) ಪಂಜೆ ಮಂಗೇಶರಾಯರ ಕಾವ್ಯನಾಮ ಯಾವುದು?

2) ಪ್ರತಿವರ್ಷ ವಿಶ್ವ ಆರೋಗ್ಯ ದಿನಾಚರಣೆಯನ್ನು ಎಂದು ಆಚರಿಸಲಾಗುತ್ತದೆ?

3) ಸರ್ವಜ್ಞ ಕವಿಯ ಜನ್ಮಸ್ಥಳ ಯಾವುದು?

4) ವ್ಯಕ್ತಿಗೆ ಕಷ್ಟದ ಭಾರ ಅರ್ಥವಾಗುವುದು ಯಾವಾಗ?

## ಪ್ರ: V ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ. ( 2x2=4 )

1) ಅತ್ತಿಮಬ್ಬೆ ವಿದ್ಯಾಪೋಷಿತೆಯಾಗಿ ಮಾಡಿದ ಕಾರ್ಯಗಳೇನು?

2) ಇಲಿಗಳ ಕಾಟ ತಪ್ಪಿಸಲು ಊರ ಗೌಡನು ಯವ ತೀರ್ಮಾನ ಕೈಗೊಂಡನು?

ಪ್ರ-VI ಇಲ್ಲಿ ನೀಡಿರುವ ಪದಗಳ ವಚನ ಬದಲಿಸಿ ಬರೆಯಿರಿ. ( 1x4=4 )

1) ಮಗು - 2) ಕಾಡು -

3) ಇಲಿ - 4) ಹುಡುಗ' -

ಪ್ರ-VII ಈ ಕೆಳಗಿನ ಪ್ರಶ್ನೆಗಳಿಗೆ ಕೊಟ್ಟ ನಾಲ್ಕು ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ. ( 1x8=8 )

1) ಹೀರೆಕಾಯಿ ತಿನ್ನುವುದರಿಂದ ಈ ಎರಡು ವಿಟಮಿನ್‌ಗಳು ನಮ್ಮ ದೇಹಕ್ಕೆ ದೊರಕುತ್ತವೆ.................

ಅ) A&O ಬ) A&C ಕ) A&B ಡ) B&C

2) ಇದು ಅತ್ತಿಮಬ್ಬೆಯ ಹುಟ್ಟೂರು ...............

ಅ) ವೆಂಗಿಮಂಡಲದ ಪುಂಗನೂರು ಬ) ಬಸವಕಲ್ಯಾಣ ಕ) ಬಾಡ ಡ) ಕಿತ್ತೂರು

3) 'ಆಗೈತಿ' ಈ ಪದದ ಗ್ರಾಂಥಿಕ ರೂಪ ...................

ಅ) ಆಗುವುದು ಬ) ಆಗಿದೆ. ಕ) ಆಗತ್ತೆ ಡ) ಆಗದು

4) 'ಮರದೊಳಗೆ' ಈ ಪದವನ್ನು ಬಿಡಿಸಿ ಬರೆದಾಗ ..................

ಅ) ಮರ+ಒಳಗೆ ಬ) ಮರದೊ+ಒಳಗೆ ಕ) ಮರದ+ಒಳಗೆ ಡ) ಮರ + ದೊಳಗೆ

5) ಧನ-ದನ ಅನುಕ್ರಮವಾಗಿ ಈ ಪದಗಳ ಅರ್ಥ .................

ಅ) ಹಣ – ಹಸು ಬ) ಹಸು – ಹಣ ಕ) ಪಾಣಿ-ಹಣ ಡ) ಹಣ-ವಸ್ತು

6) 'ಆಕ್ಸಿಡೆಂಟ್' ಈ ಅನ್ಯದೇಶಿಯ ಪದದ ಸಮಾನಾಂತರ ಕನ್ನಡ ಪದ ................

ಅ) ದುರ್ಮರಣ ಬ) ಅನಾಹುತ ಕ) ಆಘಾತ ಡ) ಅಪಘಾತ

7) 'ಸನಿಹ' ಈ ಪದದ ವಿರುದ್ಧ ಪದ ..............

ಅ) ವಿರಹ ಬ) ದೂರ ಕ) ಸಮೀಪ ಡ) ಅಸನಿಹ

8) 'ಚಿಲಿಪಿಲಿ' ಈ ಪದವನ್ನು ವ್ಯಾಕರಣದಲ್ಲಿ ಹೀಗೆಂದು ಕರೆಯುತ್ತಾರೆ ....................

ಅ) ಅನುಕರಣ ಅವ್ಯಯ ಬ) ಜೋಡುನುಡಿ ಕ) ದ್ವಿರುಕ್ತಿ ಡ) ವಿದ್ಧಿರುವ ಶಬ್ದಗಳು

ಪ್ರ-VIII ಈ ಕೆಳಗಿನ ಪದಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ. ( 1x4=4 )

1) ಉತ್ಸವ - 2) ವಿನಯ್ -

3) ವಿದಾಯ - 4) ಮೇಳ -

ಪ್ರ- IX ನಿಮ್ಮ ಊರಲ್ಲಿ ಜಾತ್ರೆಯ ನಿಮಿತ್ತ ನಿಮ್ಮ ಶಾಲೆಯ ಮುಖ್ಯೋಪಾಧ್ಯಾಯರಿಗೆ ಎರಡು ದಿನ ರಜೆ ಕೋರಿ ಒಂದು ಪತ್ರವನ್ನು ಬರೆಯಿರಿ. ( 1x4=4 )